## ಮುಕ್ತಾಯ

# ನಂಬಲಿಕ್ಕೆ ಸವಾಲು

ಲೂಕ 18ರಲ್ಲಿ ಯೇಸು ಹುಡುಕುವಿಕೆಯ ಪ್ರಶ್ನೆಯನ್ನು ಕೇಳಿದನು: "... ಮನುಷ್ಯ ಕುಮಾರನು ಬಂದಾಗ ಭೂಮಿಯ ಮೇಲೆ ನಂಬಿಕೆಯನ್ನು ಕಾಣುವನೋ?" (ವ. 8).

ಇಂದು ನಾವು ಗಲಭೆಯ, ಅಶಾಂತಿಯ ಯುಗದಲ್ಲಿ ಜೀವಿಸುತ್ತಿದ್ದೇವೆ. ಇದರ ಬಗ್ಗೆ ಕೇಳದೇ ವರ್ತಮಾನ ಪತ್ರಿಕೆಯನ್ನು ಎತ್ತಿಕೊಳ್ಳಲಾರೆವು, ರೇಡಿಯೋ, ಟೆಲಿವಿಜನ್‌ಗಳನ್ನು ಕೇಳಲಾರೆವು. ಜಗತ್ತಿನ ಸುತ್ತಲೂ ದಂಗೆಗಳೂ ಕ್ರಾಂತಿಗಳೂ ಆಗುತ್ತಿರುವದರ ಬಗ್ಗೆ ಓದುತ್ತಿರುವೆವು. ಪ್ರತಿಯೊಬ್ಬನಿಗೂ ಪ್ರಶ್ನೆಗಳೇ ಇವೆ ಆದರೆ ಕೆಲವರಲ್ಲಿ ಮಾತ್ರ ಉತ್ತರಗಳಿವೆ. ಬಹಳ ಸಲ "ಹಳೆಯದು" ತಳ್ಳಲ್ಪಡುತ್ತಿದೆ. ಅದರ ಬದಲಾಗಿ ಇಡಲು ಯಾವುದೂ ಸ್ಥಿರವಾದದ್ದು ಇರುವದಿಲ್ಲ. ಇದರಿಂದ ಅಸ್ತವ್ಯಸ್ತ ಶೂನ್ಯತೆಯುಂಟಾಗುತ್ತಲಿದೆ.

ಇಂಥಾ ಯುಗದಲ್ಲಿ ಒಮ್ಮೆ ನಿಕಟವಾಗಿ, ಪ್ರೀತಿಯಾಗಿ ಜನರು ಇಟ್ಟುಕೊಂಡ ನಂಬಿಕೆಗಳು - ಅವರ ವಿಶ್ವಾಸವೂ ಸಹ ದಾಳಿಗೊಳಪಡುವುದು ಅನಿವಾರ್ಯವಾಗಿದೆ. ದೇವರಲ್ಲಿಯ ವಿಶ್ವಾಸದ ಮೇಲೆ ನೇರವಾದ ದಾಳಿಗಳನ್ನು ನಾವು ನೋಡಿದ್ದೇವೆ. ಅನೇಕರು ತಮಗೆ ದೇವರ ಅಗತ್ಯತೆಯಿಲ್ಲ ಎನ್ನುವ ಹಂತಕ್ಕೆ ಮಾನವ ಜನಾಂಗವು ತಲುಪಿದೆ. ಉದಾಹರಣೆಯಾಗಿ, ಒಂದು ಜನಗಣತಿಯಲ್ಲಿ, ನಾಸ್ತಿಕತೆಯು, "ಆಸ್ಟ್ರೇಲಿಯಾದಲ್ಲಿ ಬಹಳ ತ್ವರಿತವಾಗಿ ಬೆಳೆಯುತ್ತಿರುವ ಧರ್ಮ" ಎಂದು ವರದಿ ಮಾಡಲಾಗಿದೆ.

ಬೈಬಲ್‌ನಲ್ಲಿಯ ನಂಬಿಕೆಯ ಮೇಲೆ ಸತತವಾಗಿ ದಾಳಿಗಳು ಮಾಡಲ್ಪಟ್ಟಿದೆ. ಯಾವುದೂ ಉಳಿಯದ ಹಾಗೆ ವಿಮರ್ಶೆಯ ಆಧುನಿಕ ಶಾಲೆಗಳು ಸತ್ಯವೇದವನ್ನು ವಿಮರ್ಶೆಮಾಡಿವೆ. ದೈವೀಯ ಪ್ರೇರಣೆಯ ತತ್ವದ ಬಗ್ಗೆ ಹಾಸ್ಯಮಾಡಿವೆ.

ಹಾಗೆಯೇ ಯೇಸುವಿನ ದೈವತ್ವದ ಮೇಲೆಯೂ ದಾಳಿ ಮುಂದುವರಿದಿದೆ. ಇವು ಹೆಚ್ಚು ಮಾರ್ಮಿಕವಾದದ್ದಾಗಿವೆ. ಯಾಕಂದರೆ ಅನೇಕರು ಯೇಸುವಿಗೆ ತುಟಿಗಳ ಸೇವೆ ಕೊಡುತ್ತಾರೆ. ಪರಮ ಶ್ರೇಷ್ಠ ಪ್ರವಾದಿ, ಶ್ರೇಷ್ಠ ಬೋಧಕ, ಉನ್ನತ ಜೀವಿ, ಇಲ್ಲವೇ ಸೂಪರಸ್ಟಾರ್ ಎಂದು ಕರೆಯುತ್ತಾರೆ. ಎಲ್ಲವನ್ನು ಹೇಳಿ ಮುಗಿಸಿದಾಗ ಅಂಥ ದೃಷ್ಟಿ ಕೋನವನ್ನು ಇಟ್ಟು ಕೊಂಡಿರುವ ಜನರು ಯೇಸುಕ್ರಿಸ್ತನನ್ನು ಜೀವದ ಕರ್ತನೆಂದೂ ಆತನ ಪಾದಗಳಿಗೆ ಎಲ್ಲಾ ಮೊಣಕಾಲುಗಳು ಬಾಗ ಬೇಕೆಂಬುದನ್ನು ಗುರುತಿಸುವದಿಲ್ಲ.

ಈ ನಾಸ್ತಿಕತೆಯ ಒಂದು ವ್ಯಾವಹಾರಿಕ ಪರಿಣಾಮವು ಸರಿಯಾದದ್ದು ಇಲ್ಲವೆ ತಪ್ಪಾದದ್ದು ಯಾವುದೇ ಮಟ್ಟದ ಮೇಲೆ ದಾಳಿ ಮಾಡುವುದಾಗಿದೆ. ಜನರು "ಸಂದರ್ಭಿಕ ನೀತಿ ಶಾಸ್ತ್ರವನ್ನು" ಹುಡಿಕಿದ್ದಾರೆ. ಸರಿಯಾದದ್ದರ ಇಲ್ಲವೇ ತಪ್ಪಾದ ವಿಷಯಗಳ ಮೇಲೆ ದೇವರ, ಬೈಬಲಿನ ಇಲ್ಲವೇ ಕ್ರಿಸ್ತನ ಅಭಿಪ್ರಾಯ ಪ್ರಕಟನೆಗಳ ಮೇಲೆ ಇನ್ನು ಮುಂದೆ ಅವಲಂಬಿಸಿರುವದಿಲ್ಲ. ಮನುಷ್ಯನು ತನ್ನನ್ನೇ ನ್ಯಾಯಾಧೀಶನನ್ನಾಗಿ ಮಾಡಿಕೊಂಡಿದ್ದಾನೆ. ಮತ್ತು ಅವನ ಕೇವಲ "ನಿಯಮವು" "ಪ್ರೀತಿಯ ನಿಯಮವಾಗಿದೆ."

ನಮ್ಮ ಯುಗದಲ್ಲಿ ಕ್ರಿಸ್ತನ ಮಾತುಗಳು ಎಷ್ಟು ಯೋಗ್ಯವಾದವುಗಳಾಗಿವೆ.

“ಮನುಷ್ಯಕುಮಾರನು ಬಂದಾಗ ಭೂಮಿಯಮೇಲೆ ನಂಬಿಕೆಯನ್ನು ಕಾಣುವನೋ?” (ಲೂಕ 18:8ಬಿ).

ಈ ಪಾಠದಲ್ಲಿ ಒಂದು ಮುಖ್ಯ ಪ್ರಶ್ನೆಯನ್ನು ಕೇಳಲು ಬಯಸುತ್ತೇವೆ. “ಇಪ್ಪತ್ತೊಂದನೆಯ ಶತಮಾನದಲ್ಲಿ ಒಬ್ಬನು ದೇವರಲ್ಲಿ, ಕ್ರಿಸ್ತನಲ್ಲಿ ಮತ್ತು ಬೈಬಲ್‌ನಲ್ಲಿ ನಂಬಿಕೆಯಿಡಬಹುದೋ?” ನಂಬಿಕೆಯು ಕಾಲಮೀರಿ ಹೋಗುವಂಥದ್ದಲ್ಲ. ಇಪ್ಪ ತೊಂದನೆಯ ಶತಮಾನದಲ್ಲಿಯೂ ಒಬ್ಬನು ಬೈಬಲ್ ಬೋಧನೆಯಲ್ಲಿ ನಂಬಿಕೆಯಿಡ ಬಹುದು ಎಂಬ ವಿಶ್ವಾಸವನ್ನು ಪ್ರಕಟಿಸುವದೇ ನನ್ನ ಉದ್ದೇಶವಾಗಿದೆ.

ಇದು ಅನೇಕ ವಿಧಗಳಲ್ಲಿ ಪ್ರದರ್ಶಿಸಲ್ಪಡಬಹುದು. ಆದರೆ ಒಂದು ಆಲೋ ಚನೆ ಮಾರ್ಗದಲ್ಲಿ ನಿಮಗೆ ಮಾರ್ಗದರ್ಶನ ಮಾಡಲು ಬಯಸುತ್ತೇನೆ - ಅದು ಇಪ್ಪತ್ತೊಂದನೆಯ ಶತಮಾನದಲ್ಲಿ ನಂಬುವುದು ಸಮಂಜಸವಾಗಿದೆಯೆಂದು ಸೂಚಿಸುವುದು. ವಿವೇಚನಾ ಶಕ್ತಿಯಿಂದ ಮಾತ್ರವೇ ಸತ್ಯವು ಎಂದೂ ಸಂಪೂರ್ಣ ವಾಗಿ ಕಂಡುಕೊಳ್ಳಲ್ಪಟ್ಟಿರುವದಿಲ್ಲ. ಅದೇ ಸಮಯದಲ್ಲಿ ಒಬ್ಬನು ಕ್ರೈಸ್ತನಾಗಿ ಕಂಡು ಕೊಳ್ಳಲ್ಪಟ್ಟಿರುವದಿಲ್ಲ. ಅದೇ ಸಮಯದಲ್ಲಿ ಒಬ್ಬನು ಕ್ರೈಸ್ತನಾದಾಗ ಅವನು ವಿವೇಚನೆ ಯಿಂದಲೂ ತಾರ್ಕಿಕವಾಗಿಯೂ ವಿಚಾರಿಸುವದನ್ನು ಬಿಟ್ಟುಬಿಡಬೇಕೆಂದು ದೇವರು ನಿರೀಕ್ಷಿಸುವದಿಲ್ಲ.

ಕೊಂಡಿಗಳನ್ನು ಒಂದಕ್ಕೊಂದು ಕೂಡಿಸುವ ಸರಪಣಿಯಂತೆ ನಮ್ಮ ಅಧ್ಯಯನವು ಕಟ್ಟಲ್ಪಡುವುದು. ನಾವು ನಮ್ಮ ಅಧ್ಯಯನವನ್ನು ಮುಗಿಸುವಾಗ, ಸ್ಪಷ್ಟವಾಗಿ ಹೇಳಿದ ಆ ಕೊಂಡಿಗಳಿಗೆ ಹಿಂದಿರುಗಿ ನೋಡಿ ನಮ್ಮ ಸ್ವಂತ ವಿಶ್ವಾಸವನ್ನು ಪರೀಕ್ಷಿಸಿಕೊಳ್ಳಬೇಕು. “ನಾನು ಇಲ್ಲಿಯವರೆಗೆ ಬರಬಹುದು, ಆದರೆ ಮುಂದೆ ಹೋಗಲಾರೆನು” ಎಂದು ಒಂದು ಹಂತದಲ್ಲಿ ನೀವು ಹೇಳಬಹುದು, ನಿಮ್ಮ “ವಿಶ್ವಾಸದ ತಿರುಳು” ಸೂಚಿಸಲ್ಪಟ್ಟಿದೆ. ಆ ಮಾಹಿತಿಯನ್ನು ಈ ಪುಸ್ತಕವನ್ನು ನಿಮಗೆ ಕೊಟ್ಟವರೊಂದಿಗೆ ಹಂಚಿಕೊಳ್ಳಿರಿ; ಅದು ನಿಮ್ಮ ಮುಂದಿನ ಅಧ್ಯಯನಕ್ಕಾಗಿ ತಳಹದಿಯನ್ನು ಒದಗಿಸುವುದು.

ಈಗ, ನಮ್ಮ ವಿಷಯದ ಮೇಲೆ ಕೇಂದ್ರೀಕರಿಸೋಣ. ವಿವಿಧ ಭಾವಗಳನ್ನು ಮಾತ್ರ ನಾವು ಯೋಚಿಸಬಹುದು. ಆದರೆ ಈ ವ್ಯವಸ್ಥೆಯು ಸಹಾಯಕರವಾಗಿರುವದೆಂದು ನಾನು ನಿರೀಕ್ಷಿಸುತ್ತೇನೆ!

## ದೇವರಿದ್ದಾನೆ ಎಂದು ನಂಬುವುದು ಸಮಂಜಸವಾಗಿದೆ

“*ಮೂರ್ಖನು* ತನ್ನ ಹೃದಯದಲ್ಲಿ ‘ದೇವರು ಇಲ್ಲ’” ಎಂದು ಹೇಳಿದ್ದಾನೆ ಎಂದು ಕೀರ್ತನೆ 14:1ಎ ಹೇಳುತ್ತದೆ (ಸ್ಪಷ್ಟತೆ ನನ್ನದು; ನೋಡಿರಿ ಕೀರ್ತನೆ 53:1). ಇಲ್ಲಿ ಬರಹಗಾರನು ಬುದ್ಧಿಶಕ್ತಿಯ ಕೊರತೆಯ ಬಗ್ಗೆ ಸಂಬಂಧಿಸಿ ಹೇಳುತ್ತಿರುವದಿಲ್ಲ. ಆದರೆ ತನ್ನ ಸುತ್ತಲೂ ಇರುವ ಪುರಾವೆಯ ವಿಶಾಲತೆಯ ಕಡೆಗೆ ತನ್ನ ಕಣ್ಣುಗಳನ್ನು ತೆರೆಯದಿರುವ ಯಾವುದೇ ಮನುಷ್ಯನ ಹುಚ್ಚುತನದ ಬಗ್ಗೆ ಹೇಳುತ್ತಿದ್ದಾನೆ.

“ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ” ಎಂದು ಕೀರ್ತನೆ 19:1 ಹೇಳುತ್ತದೆ. “ಹೇಗಂದರೆ ಕಣ್ಣಿಗೆ ಕಾಣದಿರುವ ಆತನ (ದೇವರ) ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು

ಉತ್ತರವಿಲ್ಲದವರಾಗಿದ್ದಾರೆ" ಎಂದು ರೋಮಾಪುರ 1:20 ಹೇಳುತ್ತದೆ.

ನಾನು ಬಾಲಕನಾಗಿದ್ದಾಗ, ಭಾಷಣಕಾರರು ಸರಳವಾದ ದೃಷ್ಟಾಂತವನ್ನು ಉಪಯೋಗಿಸುತ್ತಿದ್ದರು. ಅವರು ತಮ್ಮ ಕೈಗಡಿಯಾರವನ್ನು ತೆಗೆದು ತೋರಿಸುತ್ತ, ಈ ಕೈಗಡಿಯಾರ ತನ್ನನ್ನು ಮಾಡಿದವನು ಇದ್ದಾನೆಂದು ಘೋಷಿಸುವಂತೆ ಈ ಜಗತ್ತು ಸೃಷ್ಟಿಸಿದಾತನ ಇರುವಿಕೆಯನ್ನು ಘೋಷಿಸುತ್ತದೆ ಎಂದು ಹೇಳುತ್ತಿದ್ದರು. ಈ ಉದಾಹರಣೆಯು ಹಳೆಯದಾಗಿ ತೋರುವಂತೆ ಕಾಣುವಷ್ಟು ಬಹಳ ಸಲ ಉಪಯೊಗಿ ಸಲ್ಪಡುತ್ತಿದ್ದರೂ ಜನರು ತಿಳಿಯುವದಕ್ಕಿಂತ ಅದು ಹೆಚ್ಚು ಆಳವಾದದ್ದಾಗಿತ್ತು.

ದೇವರ ಅಸ್ತಿತ್ವಕ್ಕಾಗಿ ಉದ್ದವಾದ ಚರ್ಚೆಯನ್ನು ಬೆಳಸಬೇಕೆಂದರೆ, ಮೂರು ಮಟ್ಟಗಳ ಒಂದು ಪಿರ್‍ಯಾಮಿಡ್ ಕಟ್ಟುವದರಿಂದ ಪ್ರಾರಂಭಿಸುವೆನು. ತಳಹದಿ ಮಟ್ಟವನ್ನು (1) ಅಸ್ತಿತ್ವ ಎಂದು ಹೇಳುವೆನು. ಅದರ ಮೇಲಿನ ಮಟ್ಟವನ್ನು (2) ಕ್ರಮ ಹಾಗೂ ಅದರ ಮೇಲಿನ ಮಟ್ಟವನ್ನು (3) ನಮೂನೆ ಇಲ್ಲವೇ ಉದ್ದೇಶ ಎಂದು ಹೇಳುವೆನು.




ಕೈಗಡಿಯಾರದ ಉದಾಹರಣೆಯನ್ನು ಉಪಯೋಗಿಸಿ ಪ್ರತಿಯೊಂದು ಮಟ್ಟವನ್ನು ಸಂಕ್ಷೇಪವಾಗಿ ವಿವರಿಸುವೆನು.

*ಅಸ್ತಿತ್ವ:* ಕೈಗಡಿಯಾರ ಅಸ್ತಿತ್ವದಲ್ಲಿರುವುದು. ಅದು ಇಲ್ಲಿ ಇದೆ. ಅದು ಇರುವುದು ನಿಜತ್ವವಾಗಿದೆ. ಅದು ಎಲ್ಲಿಂದಲೋ ಬರಬೇಕಾಗಿತ್ತು.

*ಕ್ರಮ:* ಕೈಗಡಿಯಾರ ಅಸ್ತಿತ್ವದಲ್ಲಿರುವದಷ್ಟೇ ಅಲ್ಲ, ಆದರೆ ಅದು ಶ್ರಮವಾದ ರೀತಿಯಲ್ಲಿ ಕಾರ್ಯಮಾಡುತ್ತದೆ. ಅದು ವಿವಿಧ ಚಕ್ರಗಳನ್ನು, ಸ್ಪ್ರಿಂಗುಗಳು, ಇತರ ಭಾಗಗಳು ಒಂದಾಗಿ ಕೂಡಿಸಲ್ಪಟ್ಟ ಒಂದು ಘಟಕವಾಗಿ ಕಾರ್ಯಮಾಡುವದನ್ನು ಒಳಗೊಂಡಿರುತ್ತದೆ. ಎಲ್ಲಾ ಭಾಗಗಳು ಯೋಗ್ಯವಾಗಿ ಕಾರ್ಯ ಮಾಡುತ್ತಿರುವಾಗ ಅದು ಕ್ರಮಪ್ರಕಾರವಾದ, ಅಳತೆ ಮಾಡಲ್ಪಟ್ಟ ವಿಧದಲ್ಲಿ ಕಾರ್ಯಮಾಡುತ್ತದೆ.

*ನಮೂನೆ:* ಈ ಕೈಗಡಿಯಾರ ಕ್ರಮವಾದ ರೀತಿಯಲ್ಲಿ ಕಾರ್ಯಮಾಡುವದಷ್ಟೇ ಅಲ್ಲ, ಅದು ಮಾಡುವಂಥ ಉದ್ದೇಶವನ್ನು ನೆರವೇರಿಸುತ್ತದೆ. ಅದನ್ನು ಯಾರೇ ಮಾಡಿರಲಿ, ಅವನ ಮನಸ್ಸಿನಲ್ಲಿ ಅದಕ್ಕಾಗಿ ನಿಶ್ಚಿತವಾದ ಕಾರ್ಯವಿತ್ತು ಮತ್ತು ಅದು ಸಾಮಾನ್ಯವಾಗಿ ಈ ಉದ್ದೇಶವನ್ನು ನೆರವೇರಿಸುತ್ತದೆ: ಅದು ಸಮಯವನ್ನು ತೋರಿಸು ತ್ತದೆ.

ಹಾಗೆಯೇ ನಾವು ಈ ವಿಶ್ವದ ಕಡೆಗೆ ನೋಡುವಾಗ, ಮಾಡಿದಾತನಲ್ಲಿ ನಂಬುವದಕ್ಕಾಗಿ ಮೂರು ಪ್ರಮುಖ ವಾದಗಳಿವೆ: (1) ವಿಶ್ವವು ಅಸ್ತಿತ್ವದಲ್ಲಿರುತ್ತದೆ, (2) ಕ್ರಮ ಪ್ರಕಾರವಾದ ರೀತಿಯಲ್ಲಿ ಕಾರ್ಯ ಮಾಡುತ್ತದೆ; ದೇವರ ಪರಲೋಕದ ಮಹಾ ಟೈಮ್‌ಪೀಸದಿಂದ ನಮ್ಮ ಗಡಿಯಾರಗಳಲ್ಲಿ ಸಮಯ ವಿಟ್ಟುಕೊಳ್ಳುತ್ತೇವೆ. (3) ನಮೂನೆಯ (ಉದ್ದೇಶವು) ಪ್ರತಿಯೊಂದು ಹುಲ್ಲು ಕಡ್ಡಿಯಲ್ಲಿ, ಪ್ರತಿಯೊಂದು ಮರದಲ್ಲಿ ಕಂಡು ಬರುತ್ತದೆ.

ದೇವರ ಅಸ್ತಿತ್ವಕ್ಕೆ ವಿರುದ್ಧವಾದ, ಅತೀ ಸಾಮಾನ್ಯವಾದ ವಿರುದ್ಧ ವಾದವು ನಿಜವಾಗಿ ಮೇಲಿನ ಎರಡು ಮಟ್ಟಗಳ: ಕ್ರಮ ಮತ್ತು ನಮೂನೆ ಇವುಗಳ ವಿರುದ್ಧವಾಗಿದೆ. ಒಬ್ಬನು ನೆರೆಹಾವಳಿ, ಚಂಡಮಾರುತ, ಭೂಕಂಪ ಇಲ್ಲವೇ ಬಹುಶಃ ತನ್ನ ಸ್ವಂತ ಜೀವನದಲ್ಲಿಯ ಕೆಲವು ವೈಯಕ್ತಿಕ ದುಃಖದ ಸಂಗತಿಗಳ ಕಡೆಗೆ ತೋರಿಸಬಹುದು. ಈ ಸಂಗತಿಗಳ ಕಾರಣದಿಂದ, ಅವರು ದೇವರು ಇಲ್ಲ ಎಂದು ತೀರ್ಮಾನಿಸಬಹುದು. ಹೀಗಿದ್ದರೂ ಇದನ್ನು ಅನುಸರಿಸುವ ಅಗತ್ಯತೆ ಯಿರುವದಿಲ್ಲ.[1]

ಈ ವಿಚಾರ ಸರಣಿಗಳ ಪ್ರತಿ ಯೊಂದನ್ನು ಆಳವಾಗಿ ಪರೀಕ್ಷಿಸಲು ನನಗೆ ಸಮಯ ಸಾಲದು. ಆದುದರಿಂದ ಪಿರ‍್ಯಾಮಿಡ್ಡಿನ ಅಸ್ತಿವಾರದ ಮೇಲೆ - ಅಸ್ತಿತ್ವದ ಮೇಲೆ ಕೇಂದ್ರೀಕರಿಸುತ್ತೇವೆ.

ಕೈಗಡಿಯಾರದ ಉದಾಹರಣೆಯ ಕಡೆಗೆ ತಿರುಗಿಕೊಳ್ಳೋಣ. ಕಾಲುದಾರಿಯಲ್ಲಿ ಬಿದ್ದಿರುವ ಹಾಳಾದ ಕೈಗಡಿಯಾರವನ್ನು ನೀವು ಕಂಡುಕೊಂಡರೆ ಏನಾಗುವುದು? ಅದನ್ನು ಜೀಕಿಸಿದನು - ಬಹುಶಃ ಅದು ತುಳಿಯಲ್ಪಟ್ಟಿದೆ ಎಂದು ಕಲ್ಪಿಸಿಕೊಳ್ಳಿರಿ. ಅದು ಇನ್ನು ಸರಿಯಾದ ಸಮಯ ತೋರಿಸುವದಿಲ್ಲ. ಅದು ನಡೆಯದೇ ಇರಬಹುದು. ಇದು ಕೈಗಡಿಯಾರವನ್ನು ತಯಾರಿಸಿದವನು ಇನ್ನು ಮುಂದೆ ಇಲ್ಲ ಎಂದು ಅರ್ಥವನ್ನು ಕೊಡುವುದೋ? ಇಲ್ಲ, ಕೆಟ್ಟು ಹೋದ ಸ್ಥಿತಿಯಲ್ಲಿದ್ದರೂ ರುಜುವಾತು - ಸ್ಪಷ್ಟವಾದ ಮತ್ತು ತಪ್ಪಾಗಿರದ ರುಜುವಾತು ಇನ್ನೂ ಅಲ್ಲಿದೆ. ಕೈಗಡಿಯಾರವು ಇನ್ನೂ ಅಸ್ತಿತ್ವದಲ್ಲಿದೆ.

ಅದು ಅಸ್ತಿತ್ವದಲ್ಲಿದ್ದರೆ, ಅದು ಎಲ್ಲಿಂದ ಬಂದಿತು?

ಎರಡು ರೀತಿಯ ಅಸ್ತಿತ್ವಗಳು - ಮನಸ್ಸು ಮತ್ತು ವಸ್ತು (Mind and Matter) ಇವೆಯೆಂದು ಹೇಳಲಾಗಿದೆ. ಶೂನ್ಯದಿಂದ ಯಾವುದೂ ಬರಲಾರದ್ದರಿಂದ ಯಾವುದೊ ಒಂದು ನಿತ್ಯವಾದದ್ದನ್ನೂ ಮತ್ತು ಬೇರೆಯದನ್ನೂ ಉತ್ಪಾದಿಸಿದ್ದು ಆಗಿದ್ದಿರಬೇಕು, ಮನಸ್ಸು ಯಾವಾಗಲೂ ಅಸ್ತಿತ್ವದಲ್ಲಿದ್ದು ವಸ್ತುವನ್ನು ಉತ್ಪಾದಿಸಿರಬೇಕು. ಅಥವಾ ವಸ್ತು ಯಾವಾಗಲೂ ಅಸ್ತಿತ್ವದಲ್ಲಿದ್ದು ಮನಸ್ಸನ್ನು ಉತ್ಪಾದಿಸಿರಬೇಕು. ಜೀವಿಸದ, ವಿವೇಚಿಸದ, ನೀತಿ ಬಾಹಿರವಾದ ವಸ್ತುವು ಜೀವಿಸುವ, ಯೋಚಿಸುವ, ನೈತಿಕ ಮನಸ್ಸಾಕ್ಷಿಯೊಂದಿಗಿನ ಮನಸ್ಸನ್ನು ಉತ್ಪಾದಿಸುವದನ್ನು ಯೋಚಿಸುವುದು ಅಸಾಧ್ಯವಾಗಿರುವದರಿಂದ ಅದು ವಿಭಿನ್ನ ಮಾರ್ಗದಲ್ಲಿರಬಹುದು: ನಿತ್ಯವಾದ ಮನಸ್ಸು ವಸ್ತುವನ್ನು ಉತ್ಪಾದಿಸಿರಬಹುದು.

ನನ್ನ ಒಬ್ಬ ಸ್ನೇಹಿತ ಜಿಮ್‌ವಾಲ್ಡರನ್ ಇದನ್ನು ಉದಾಹರಣೆಯಾಗಿ ಹೇಳಿದ್ದಾನೆ: ಪಾಕಿಸ್ತಾನಕ್ಕೆ ಹೋಗುವ ಒಂದು ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದರು. ಅವರು ಒಬ್ಬ ರಷ್ಯನ್ನನ ಪಕ್ಕದಲ್ಲಿ ಕುಳಿತಿದ್ದರು. ಅವರು ಮಾತನಾಡಲಿಕ್ಕೆ ಪ್ರಾರಂಭಿಸಿದರು. ಬೇಗನೇ ಸಂಭಾಷಣೆಯು ಧಾರ್ಮಿಕ ವಿಷಯಗಳ ಕಡೆಗೆ ತಿರುಗಿತು. ದೇವರು ಈ ಜಗತ್ತನ್ನು ನಿರ್ಮಿಸಿದ್ದಾನೆಂಬುದನ್ನು ರಷ್ಯಾದವನು ನಂಬದವನಾಗಿದ್ದನು. ಅಂತಿಮವಾಗಿ ಜಿಮ್, "ರಷ್ಯಾದಲ್ಲಿ ಚಿಕ್ಕ ಮಕ್ಕಳು ಮಣ್ಣಿನ ಪಕ್ಷಿಗಳನ್ನು ಮಾಡುವರೋ?" ಎಂದು ಪ್ರಶ್ನಿಸಿದನು. ಆ ಮನುಷ್ಯನು ಮುಗುಳ್ನಕ್ಕು ರಷ್ಯಾದಲ್ಲಿ ಚಿಕ್ಕಮಕ್ಕಳು ಮಣ್ಣಿನ ಪಕ್ಷಿಗಳನ್ನು ಮಾಡುವದನ್ನು ಒಪ್ಪಿಕೊಂಡನು.

"ಇದು ಆಸಕ್ತಿಯುಳ್ಳದ್ದು. ನಾನು ಬಂದಿರುವ ಜಗತ್ತಿನ ಭಾಗದಲ್ಲಿಯೂ ಮಕ್ಕಳು ಮಣ್ಣಿನ ಪಕ್ಷಿಗಳನ್ನು ಮಾಡುವರು. ಆದರೆ ಒಂದು ಸಂಗತಿಯನ್ನು ನಾನೆಂದೂ ನೋಡಿರುವದಿಲ್ಲ. ಮಣ್ಣಿನ ಪಕ್ಷಿಯು ಚಿಕ್ಕ ಮಗುವನ್ನು ಮಾಡುವದನ್ನು ನಾನು ಎಂದು ನೋಡಿರುವದಿಲ್ಲ" ಎಂದು ಜಿಮ್ ಹೇಳಿದರು.

"ಮನಸ್ಸು" ಮತ್ತು "ವಸ್ತು"ವಿನ ಬಗ್ಗೆ ಇದು ಸೂಚಿಸಲ್ಪಟ್ಟಿತು. ಮನಸ್ಸು ಶಕ್ತಿಯಿಂದ

ವಸ್ತುವನ್ನು ಉಪಯೋಗಿಸುವ ಸಾಮಾರ್ಥ್ಯವುಳ್ಳದ್ದಾಗಿದೆ. ಆದರೆ ತದ್ವಿರುದ್ಧವಾಗಿ ಅಲ್ಲ. ಜಿಮ್ ಅವರು ಮುಗುಳ್ನಗೆಯೊಂದಿಗೆ ಮುಕ್ತಾಯಗೊಳಿಸಿದರು: "ವೈಯಕ್ತಿಕವಾಗಿ, ಮಣ್ಣಿನ ಪಕ್ಷಿಗಳನ್ನು ಮಕ್ಕಳು ಮಾಡುವರೆಂಬುದನ್ನು, ಮಣ್ಣಿನ ಪಕ್ಷಿಗಳು ಮಕ್ಕಳನ್ನು ಮಾಡುವದನ್ನು ನಂಬುವದಕ್ಕಿಂತ ಹೆಚ್ಚಾಗಿ ನಂಬುತ್ತೇನೆ" ಎಂದು ಹೇಳಿದರು.

ಏನಾದರೊಂದು ಇರುವದರಿಂದ ಯಾವಾಗಲೂ ಏನಾದರೊಂದು ಆಗಿರಬೇಕಾಗುವುದು - ಯಾಕಂದರೆ ಏನಾದರೊಂದು ಏನೂ ಇಲ್ಲದ್ದರಿಂದ ಬರಲಾರದು. ಈ ಜಗತ್ತು ಯಾವಾಗಲೂ ಇರುವುದೋ. ಇಲ್ಲವೇ ಒಂದು ಹಂತದಲ್ಲಿ ಮಾಡಲ್ಪಟ್ಟಿತೋ?

ಕೆಲವು ವರ್ಷಗಳ ಹಿಂದೆ, ವಿವಿಧ ಕ್ಷೇತ್ರಗಳ ವಿಜ್ಞಾನಿಗಳು ಬರೆದ, *The Evidence of God in an Expanding Universe* ಎಂಬ ಪುಸ್ತಕವನ್ನು ಓದುವದರಲ್ಲಿ ಬಹಳ ಆನಂದ ಪಟ್ಟೆನು. ಅಷ್ಟು ಜನರು ಸಂಶೋದನೆಯ ವಿವಿಧ ಕ್ಷೇತ್ರಗಳಿಂದ ಈ ವಿಶ್ವವು "ಕ್ಷೀಣಿಸುತ್ತಾಯಿದೆ" ಎಂಬುದಕ್ಕೆ ರುಜುವಾತುಗಳನ್ನು ಉಪಯೋಗಿಸಿದ್ದು ಆಸಕ್ತಿಯುಳ್ಳದ್ದಾಗಿತ್ತು. ಅದು ತಾನೇ ಉಳಿದು ಹೋಗುತ್ತದೆ, ಮೇಲಿನಿಂದ ಕೆಳಗೆ ಕ್ಷೀಣಿಸುತ್ತಾಯಿದೆ ಮತ್ತು ಇತರ ಉದಾಹರಣೆಗಳೊಂದಿಗೆ ಹೋಲಿಸಲ್ಪಟ್ಟಿತ್ತು. ಏನೇ ಇರಲಿ ಎರಡು ಸತ್ಯಗಳು ಸ್ಪಷ್ಟವಾಗಿವೆ: (1) ವಿಶ್ವವು ನಿತ್ಯವಾದದ್ದಲ್ಲ, ಹಾಗು (2) ಕೆಲವೊಂದು ಹಂತದಲ್ಲಿ ಅದಕ್ಕೆ ಪ್ರಾರಂಭವಿತ್ತು.[2]

ಏನಾದರೊಂದು ಏನೂ ಇಲ್ಲದ್ದರಿಂದ ಬರುವುದು ಅಸಾಧ್ಯವಾಗಿದ್ದುದರಿಂದ, ಇದು ಪುನಃ ನಮ್ಮನ್ನು ವಿಶ್ವಕ್ಕಾಗಿ ಲೆಕ್ಕ ಕೊಡುವದಕ್ಕೆ ನಮ್ಮನ್ನು ಒತ್ತಡದೊಂದಿಗೆ ತರುತ್ತದೆ. ಇದು ಒಂದು ರೀತಿಯ ನಿತ್ಯವಾದ ಮನಸ್ಸು - ಬೇರೆ ಮಾತಿನಲ್ಲಿ ದೇವರು ಆಗಿರಲೇ ಬೇಕು.

ನಿಮ್ಮ ಸುತ್ತಲೂ ನೋಡಿರಿ. ನೀವು ವಾಸಿಸುತ್ತಿರುವ ಮನೆಯು ತನ್ನಷ್ಟಕ್ಕೆ ತಾನೇ ಬಂದಿತೋ? "ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಸಮಸ್ತವನ್ನು ಕಟ್ಟಿದವನು ದೇವರೇ"[3] ಎಂದು ಇಬ್ರಿಯ 3:4 ಇದನ್ನು ಚೆನ್ನಾಗಿ ಸಂಕ್ಷೇಪಿಸಿ ಹೇಳುತ್ತದೆ.

## ದೇವರು ಪ್ರತಿಯೊಂದನ್ನು ಮಾಡಿದನು ಎಂದು ನಂಬುವುದು ಸಮಂಜಸವಾಗಿದೆ

ಸೃಷ್ಟಿಕರ್ತನು ಇದ್ದಾನೆ ಎಂದು ನಂಬುವದಕ್ಕೆ ಅದು ಸಮಂಜಸವಾಗಿರುವದನ್ನು ತೋರಿಸುವಂತೆ ಮಾಡಲು ಈ ವಿಶ್ವವು ತಪ್ಪಾಗಿರದ ಸಂಕೇತವೆಂಬುದನ್ನು ನಾವು ತೋರಿಸುತ್ತಿದ್ದೇವೆ. ಈಗ ನಾವು ಸುತ್ತಲಿನ ವಿಚಾರದ ಕಡೆಗೆ ತಿರುಗೋಣ ಮತ್ತು ಇನ್ನೊಂದು ದಿಕ್ಕಿನಿಂದ ಅದನ್ನು ದೃಷ್ಟಿಸಿ ನೋಡೋಣ: ಈ ಸೃಷ್ಟಿಕರ್ತನು ನಿಜವಾಗಿಯೂ ವಿಶ್ವವನ್ನು ಸೃಷ್ಟಿಸಿದನು. ಅದು ಅನಿರೀಕ್ಷಿತವಾಗಿ ಸಂಭವಿಸಲಿಲ್ಲ. ಅದು ಸೃಷ್ಟಿಸಲ್ಪಟ್ಟಿತ್ತು; ಅದು ಕ್ರಮ ಪಡಿಸಲ್ಪಟ್ಟಿತ್ತು; ಅದು ರೂಪಿಸಲ್ಪಟ್ಟಿತ್ತು.

ವಿಷಯದ ಕೇಂದ್ರಕ್ಕೆ ಹೋಗೋಣ. ದೇವರು ಪ್ರತಿಯೊಂದನ್ನು ಸೃಷ್ಟಿಸಿದನೆಂದು ನಂಬುವುದು ಸಮಂಜಸವಾಗಿದ್ದುದರಿಂದ ದೇವರು ಮನುಷ್ಯನನ್ನು ಸೃಷ್ಟಿಸಿದನು - ದೇವರು ನಿನ್ನನ್ನೂ ನನ್ನನ್ನೂ ಸೃಷ್ಟಿಸಿದನು ಎಂದು ನಂಬುವುದೂ ಸಹ ಸಮಂಜಸವಾಗಿದೆ.

ಸ್ವಲ್ಪ ಸಮಯದ ಹಿಂದೆ ಪಿರ್‍ಯಾಮಿಡನ್ನು ನಾನು ಪರಿಚಯ ಮಾಡಿಕೊಟ್ಟೆನು. ಈಗ ಈ "ರುಜುವಾತುಗಳನ್ನು" ಮನುಷ್ಯನಿಗೆ ಅನ್ವಯಿಸಿರುವದಿಲ್ಲ. ಹೀಗಿದ್ದರೂ

ನಾನು ಯಾವುದರ ಬಗ್ಗೆ ಮಾತಾಡುತ್ತಿರುವೆನು ಅದಕ್ಕೆ ಮಾನವನು ಅತ್ಯುತ್ತಮವಾದ ಉದಾಹರಣೆಯಾಗಿದ್ದಾನೆಂದು ಯೋಚಿಸುತ್ತೇನೆ.



ನಿಮ್ಮ ಕಡೆಗೆ ನೋಡಿಕೊಳ್ಳಲು ಕೆಲವು ನಿಮಿಷಗಳನ್ನು ತಗೆದು ಕೊಳ್ಳಿರಿ. ಮಾನವ ದೇಹದಂತೆ ಯಾವುದೇ ಯಂತ್ರ ಇರುವುದಿಲ್ಲ. ಮಾನವ ಕೈಯಂತೆ ಯಾವುದೇ ಯಾಂತ್ರಿಕ ಉಪಕರಣವಿರುವದಿಲ್ಲ.[4] ಮಾನವ ಕಣ್ಣಿನಂತೆ ಯಾವುದೇ ಕ್ಯಾಮರಾ ಇರುವದಿಲ್ಲ. ಮಾನವ ಹೃದಯದಂಥೆ ಯಾವುದೇ ಪಂಪು ಇರುವದಿಲ್ಲ. ತನ್ನನ್ನು ತಣ್ಣಗೆ ಮಾಡಿಕೊಳ್ಳುವಂಥ ಸ್ವಯಂ ಗುಣಪಡಿಸುವಿಕೆಯ ಮಾನವ ಚರ್ಮದಂತೆ ಬೇರೆ ಯಾವುದೇ ಹೊದಿಸುವಿಕೆಯ ವ್ಯವಸ್ಥೆ ಇರುವದಿಲ್ಲ - ಮಾನವ ಆಂತರ್ಯ ದಲ್ಲಿಯ ಅಂಗಗಳಂತೆ ಯಾವುದೇ ರಚನೆಯಿರುವದಿಲ್ಲ. ದಾವೀದನ ಮಾತುಗಳಲ್ಲಿ, “ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ” (ಕೀರ್ತನೆ 139:14).

ಮಾನವ ಮನಸ್ಸನ್ನು ಒಂದು ಉದಾಹರಣೆಯಾಗಿ ತೆಗೆದು ಕೊಳ್ಳಿರಿ. ಕಂಪ್ಯೂಟರುಗಳ ಆಶ್ಚರ್ಯಕರವಾದ ಯುಗದಲ್ಲಿ ನಾವಿದ್ದೇವೆ. ನ್ಯೂಯಾರ್ಕ ಪಟ್ಟಣದಲ್ಲಿಯ ಪ್ರತಿಯೊಂದು ಗಗನ ಚುಂಬೀ ಕಟ್ಟಿಡವನ್ನು ತುಂಬಲು ಸಾಕಾಗುವಷ್ಟು ದೊಡ್ಡದಾದ ಒಂದು ಕಂಪ್ಯೂಟರನ್ನು ನೀವು ತಯಾರಿಸಿದರೆ, ಅದು ಇನ್ನೂ ಕೇವಲ ಚಿಕ್ಕಮಗುವಿನ ಮೆದುಳಿನ ಸಾಮರ್ಥ್ಯವನ್ನು ಚಾತುರ್ಯವನ್ನು ಇಲ್ಲವೇ ಸೃಜನಾತ್ಮಕತೆಯನ್ನು ತಲುಪಲು ಪ್ರಾರಂಭಿಸಲಾರದು.

ಜೀವದ ಕೆಳಗಿನ ರೂಪಗಳಿಂದ ನಾವು ಉದ್ಭವಿಸಿದೆವೆಂದು ವಿಕಾಸವಾದವು ಹೇಳುತ್ತದೆ. ಆ ವಾದದ ಪ್ರಕಾರವಾಗಿ, ನಮ್ಮ ಮನಸ್ಸುಗಳನ್ನು ನಾವು ಈಗ ಬೆಳಿಸಿಕೊಂಡಿದ್ದೇವೆ. ಯಾಕಂದರೆ ನಾವು ಈ ಮಟ್ಟಗಳಲ್ಲಿ ಇತರ ಪ್ರಾಣಿಗಳೊಂದಿಗೆ ಸ್ಪರ್ಧಿಸಲು ನಾವು ಸಾಕಷ್ಟು ಬಲಶಾಲಿಗಳಾಗಿಲ್ಲ ಇಲ್ಲವೇ ಅಷ್ಟು ತ್ವರಿತಗತಿಯು ಳ್ಳವರಾಗಿರುವದಿಲ್ಲ ಅಥವಾ ಸಾಕಷ್ಟು ದೊಡ್ಡವರಾಗಿರುವದಿಲ್ಲ. ಆದಾಗ್ಯೂ ನಮಗಿರುವ ಮೆದುಳುಗಳ ಸಾಮರ್ಥ್ಯದ ಅತೀ ಚಿಕ್ಕ ಶತಭಾಗ ಮಾತ್ರ ಬೆಳವಣಿಗೆ ಯಾಗಿದೆಯೆಂಬುದು ಸತ್ಯವಾಗಿದೆ. ಮಾನವ ಜನಾಂಗದ ಪ್ರಗತಿಯು ಯಾವುದೇ “ಬದುಕಿ ಉಳಿಯುವ” ತತ್ವದಿಂದ ವಿವರಿಸಲ್ಪಡಲಾರದು. ದೇವರು ನಮಗೆ ನಮ್ಮ ಮನಸ್ಸುಗಳನ್ನು ಕೊಟ್ಟನು ಎಂಬುದು ಸರಳ ಸಂಗತಿಯಾಗಿದೆ. ವಿಚಾರಿಸುವ ಜೀವಿಯು, ನಮ್ಮನ್ನು ಯೋಚಿಸುವ

ಜೀವಿಗಳನ್ನಾಗಿ ಮಾಡಿದನು.

ನಾನು ಪುನಃ ಹೇಳುತ್ತೇನೆ: ದೇವರು ಮನುಷ್ಯನನ್ನು ಸೃಷ್ಟಿಸಿದ್ದಾನೆಂದು ನಂಬುವುದು ಸಮಂಜಸವಾಗಿದೆ. ಪೂರ್ವ ಬಾಲವಿಲ್ಲದ ಕೋತಿಯಂತಿರುವ ಪ್ರಾಣಿಯ ಸ್ವರೂಪದಲ್ಲಿಯದಕ್ಕಿಂತ ಹೆಚ್ಚಾಗಿ ದೇವರ ಸ್ವರೂಪದಲ್ಲಿ ನಾವು ಸೃಷ್ಟಿಸಲ್ಪಟ್ಟಿರುವೆವೆಂದು (ಆದಿಕಾಂಡ 1:26) ನಂಬುವುದು ಎಷ್ಟೋ ಹೆಚ್ಚು ಸಮಂಜಸವಾಗಿದೆ.

## ದೇವರು ಮಾನವನಿಗೆ ಒಂದು ಪ್ರಕಟನೆಯನ್ನು ಕೊಟ್ಟನು ಎಂದು ನಂಬುವುದು ಸಮಂಜಸವಾಗಿದೆ

ದೇವರು ಈ ಜಗತ್ತನ್ನು ಸೃಷ್ಟಿಸಿದ್ದರೆ, ಆತನು ಮನುಷ್ಯನಿಗೆ ಅವನು ಎಲ್ಲಿಂದ ಬಂದನು, ಯಾಕೆ ಇಲ್ಲಿದ್ದಾನೆ, ಮತ್ತು ಜೀವಿತವು ಯಾವುದರ ಬಗ್ಗೆ ಇದೆ ಎಂಬ ಮಾಹಿತಿಕೊಡುವುದು ಸಮಂಜಸವಾಗಿದೆ.

ಒಂದು ದಿನ ನೀವು ಮನೆಗೆ ಬರುವಿರಿ, ನಿಮ್ಮ ಮನೆಯ ಮುಂದೆ ದೊಡ್ಡ, ಹೊಳೆಯುವ ಯಂತ್ರವನ್ನು ಕಂಡುಕೊಳ್ಳುವಿರಿ ಎಂದು ಕಲ್ಪನೆ ಮಾಡಿಕೊಳ್ಳಿರಿ. ಅದು ಕಠಿಣವಾದದ್ದೂ, ಸುಂದರವಾದ ಉಪಕರಣಗಳಿಂದ ತುಂಬಿದ್ದು ಬಹಳ ಪ್ರಗತಿ ಹೊಂದಿದ ಸಂಶೋಧನೆಗಳನ್ನೊಳಗೊಂಡಿದ್ದು ಆಗಿತ್ತು. ಅದು ಬಹಳ ಪ್ರಾಮುಖ್ಯವಾದ ಕಾರ್ಯಕ್ಕಾಗಿ ರೂಪಿಸಲ್ಪಟ್ಟಿತ್ತು. ಹೀಗಿದ್ದರೂ ಅದರ ಉದ್ದೇಶದ ಬಗ್ಗೆ ಯಾವುದೇ ಸೂಚನೆಯಿರಲಿಲ್ಲ. ಯಂತ್ರದ ಮೇಲೆ ಯಾವುದೇ ಮಾಹಿತಿ ಬರೆಯಲ್ಪಟ್ಟಿದ್ದಿಲ್ಲ. ಆ ಯಂತ್ರವು ಯಾವ ಉದ್ದೇಶಕ್ಕಾಗಿ ರೂಪಿಸಲ್ಪಟ್ಟಿದೆ ಎಂದು ನೀವು ಎಂದೂ ಹೇಳಲಾರಿರಿ ಎಂದು ಊಹಿಸಿಕೊಳ್ಳಿರಿ. ಎರಡು ತೀರ್ಮಾನಗಳಲ್ಲಿ ಒಂದಕ್ಕೆ ನೀವು ಬರಬಹುದು: (1) ತನ್ನ ಉದ್ದೇಶವನ್ನು ಪ್ರಕಟಿಸುವ ಮೊದಲು ಅದನ್ನು ತಯಾರಿಸಿದವನು ಸತ್ತು ಹೋಗಿರಬೇಕು, ಇಲ್ಲವೇ (2) ತಯಾರಿಸಿದವನು ಹುಚ್ಚನಾಗಿರಬಹುದು.

ನಮ್ಮ ಸುತ್ತಲೂ ಈ ಲೋಕದ ಕಡೆಗೆ ನಾವು ನೋಡುವಾಗ - ಮನುಷ್ಯನಿಂದ ನಿರ್ಮಿತವಾದ ಯಾವುದೇ ಯಂತ್ರಕ್ಕಿಂತ ಹೆಚ್ಚು ಸಂಯುಕ್ತವಾದ, ಸಮ್ಮಿಶ್ರ ಸಂಗತಿಗಳನ್ನು ಕಂಡುಕೊಳ್ಳುತ್ತೇವೆ. ಜೀವಿತವು ಏನಾಗಿದೆಯೆಂದು ಸೃಷ್ಟಿಕರ್ತನು ನಮಗೆ ಹೇಳಲು ನಮ್ಮೊಂದಿಗೆ ಸಂಪರ್ಕಿಸಿರದಿದ್ದರೆ ಆತನು ಸತ್ತು ಹೋಗಿರಬಹುದು ಇಲ್ಲವೇ ಹುಚ್ಚನಾಗಿರಬಹುದು ಎಂದು ತೀರ್ಮಾನಿಸುತ್ತಿದ್ದೆವು. ದೇವರು ಇವೆರಡೂ ಆಗಿರುವದಿಲ್ಲ. ಆದುದರಿಂದ ಆತನು ನಮ್ಮೊಂದಿಗೆ ತಿಳಿಸಿದ್ದಾನೆ ಎಂದು ನಾವು ತೀರ್ಮಾನಿಸುತ್ತೇವೆ. ಇಬ್ರಿಯ 1:1, 2ರಲ್ಲಿಯ, “ದೇವರು ... ಮಾತಾಡಿದ್ದಾನೆ” ಎಂಬ ಪ್ರಮುಖ ಮಾತುಗಳು ಪರಿಪೂರ್ಣವಾಗಿ ಸಮಂಜಸವಾದವುಗಳಾಗಿವೆ.

ದೇವರು ನಮಗೆ ಸಂದೇಶವನ್ನು ತಿಳಿಸಿದ್ದಾರೆ, ಕೆಲವು ಪ್ರಮಾಣಗಳಿವೆ, ಸರಿಯಾದವುಗಳೂ ತಪ್ಪಾದವುಗಳೂ ಆಗಿರುವ ಕೆಲವು ಸಂಗತಿಗಳಿವೆ ಎಂದು ಅರ್ಥವಾಗುತ್ತದೆ. ಮನುಷ್ಯನು ತಾನೇ ಪ್ರಮಾಣವಾಗಿರುವದಿಲ್ಲ. “ಮಾನವನ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆ ಗೊತ್ತು; ಮನುಷ್ಯನು ನಡೆದಾಡುತ್ತ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನು ಇಡಲಾರನು” (ಯೆರೆಮೀಯ 10:23) ಎಂದು ಬೈಬಲ್ ಹೇಳುತ್ತದೆ.

ಈ ಸಂದೇಶವು ಯಾವುದು? ಇಂದಿನ ಅನೇಕ ಪುಸ್ತಕಗಳು ಮೇಲಿನ ಯಾವುದೇ ಶಕ್ತಿಯಿಂದ ಪ್ರೇರಿಸಲ್ಪಟ್ಟಿವೆಯೆಂದು ಹೇಳಿಕೊಳ್ಳುತ್ತವೆ. ಅವುಗಳಲ್ಲಿ ಎಲ್ಲವೂ ಎಷ್ಟೋ ವಿಷಯಗಳಲ್ಲಿ ಬೇರೆಯವುಗಳೊಂದಿಗೆ ವಿರುದ್ಧವಾಗಿರುತ್ತವೆ. ದೇವರ ಪ್ರಕಟನೆಯನ್ನು

ನಾವು ಸ್ಪಷ್ಟವಾಗಿ ಯೋಚಿಸುವ ಅಗತ್ಯತೆಯಿದೆ. ನಮ್ಮ ವಿಚಾರವನ್ನು ಒಂದು ಹೆಜ್ಜೆ ಮುಂದಕ್ಕೆ ಒಯ್ಯೋಣ: ಮನುಷ್ಯನಿಗೆ ದೇವರು ಕೊಟ್ಟ ಪ್ರಕಟನೆಯು ಬೈಬಲಾಗಿದೆ ಎಂದು ನಂಬುವುದು ಸಮಂಜಸವಾಗಿದೆ.

ಬೈಬಲಿನ ಪ್ರೇರಣೆಯನ್ನು ಅಗಣಿತ ರುಜುವಾತುಗಳು ತೋರಿಸುತ್ತವೆ: ಐಕ್ಯತೆ, ಪುರಾತನತೆ, ಆಧುನಿಕತೆ, ಐತಿಹಾಸಿಕತೆ ಹಾಗೂ ಭೌಗೋಲಿಕ ನಿರ್ದಿಷ್ಟಿತೆ, ನಿಷ್ಪಕ್ಷಪಾತತೇ, ಪ್ರಭಾವ, ನಾಶವಾಗದೇ ಇರುವಂಥದ್ದು, ನೆರವೇರಿದ ಪ್ರವಾದನೆ ಇತ್ಯಾದಿಗಳು. ನಮ್ಮ ಸಮಯ ಮಿತಿಯ ನಿಮಿತ್ತವಾಗಿ ಈಗಾಗಲೇ ಪ್ರಾರಂಭಿಸಿದ ವಿಚಾರ ಸರಣಿಯಲ್ಲಿರೋಣ. ಇದನ್ನು ಯೋಚಿಸಿರಿ: ದೇವರು ಜಗತ್ತನ್ನು ಸೃಷ್ಟಿಸಿದ್ದರೆ ಮನುಷ್ಯನನ್ನು ಜಗತ್ತಿನಲ್ಲಿಟ್ಟಿದ್ದರೆ ಮತ್ತು ಮನುಷ್ಯನಿಗೆ ಒಂದು ಪ್ರಕಟನೆಯನ್ನು ಕೊಟ್ಟಿದ್ದರೆ, ಕೊಡಲ್ಪಟ್ಟ ಪ್ರಕಟಣೆಯು ದೇವರ ಜಗತ್ತಿನಲ್ಲಿ ಜೀವಿಸಲು ಮನುಷ್ಯನನ್ನು ಸಾಮಾರ್ಥ್ಯವುಳ್ಳವನನ್ನಾಗಿ ಮಾಡುವುದೆಂದು ನಂಬುವುದು ಸಮಂಜಸವಾದದ್ದಾಗಿದೆ ಯಲ್ಲವೇ?[5]

ಜಗತ್ತನ್ನು ಇಡೀಯಾಗಿ ನೋಡಿರಿ. ಮನುಷ್ಯನು ಅತಿ ಹೆಚ್ಚಾಗಿ ಪ್ರಗತಿ ಹೊಂದಿದ, ಮನುಷ್ಯನ ಅಗತ್ಯತೆಗಳು ಬಹಳ ಸಂಪೂರ್ಣವಾಗಿ ಪೂರೈಸಿದ, ಮಾನವ ಜೀವನವು ಅತೀ ಹೆಚ್ಚಾಗಿ ಗೌರವಿಸಲ್ಪಟ್ಟು ಕಾಪಾಡಲ್ಪಟ್ಟಿದ್ದ ದೇಶಗಳನ್ನು ಗುರುತಿಸಿರಿ. ಹಿಂದಿನ ಕಾಲದಲ್ಲಿ, ಕನಿಷ್ಠ ಪಕ್ಷ ಆ ದೇಶಗಳಲ್ಲಿ ಬೈಬಲಿಗೆ ಅತೀ ಹೆಚ್ಚು ಪ್ರಾಭಾವವಿತ್ತೆಂಬುದನ್ನು ನೀವು ಕಂಡುಕೊಳ್ಳುವಿರಿ.[6]

ಜಗತ್ತಿನಲ್ಲೆಲ್ಲಾ ಪೌಲನ ಮಾತುಗಳು ಸತ್ಯವಾದವುಗಳೆಂದು ಸ್ಥಿರಪಡಿಸಲ್ಪಟ್ಟಿವೆ: "ದೈವ ಪ್ರೇರಿತವಾದ ಪ್ರತಿಯೊಂದು ಲೇಖನವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿ ಶಿಕ್ಷೆಗೂ ಉಪಯುಕ್ತವಾಗಿದೆ. ಆದದರಿಂದ ದೇವರ ಮನುಷ್ಯನು ಪ್ರವೀಣನಾಗಿ *ಸಕಲ ಸತ್ಕಾರ್ಯಕ್ಕೆ* ಸನ್ನದ್ಧನಾಗುವನು" (2 ತಿಮೊಥೆ 3:16, 17; ಸ್ಪಷ್ಟನೇ ನನ್ನದು).

ಬೈಬಲಿನಲ್ಲಿಯೇ ಕಟ್ಟಲ್ಪಟ್ಟ ಪ್ರೇರಣೆಯ ರುಜುವಾತು ಇರುವುದು. ಬೈಬಲು ನಿಜವಾಗಿಯೂ ದೇವರಿಂದ ಬಂದಿತೆಂದು ನಂಬುವದರಲ್ಲಿ ನಿಮಗೆ ಸಮಸ್ಯೆಯಿದ್ದರೆ, ನೀವು ನೇರವಾಗಿ ಅದಕ್ಕೆ ಹೋಗಿ ಅದರೊಂದಿಗೆ ನಿಜವಾಗಿಯೂ ಪರಿಚಿತಯು ಳ್ಳವರಾಗಿರ್ರಿ. "ಕೇಳುವದರಿಂದ ನಂಬಿಕೆ ಉಂಟಾಗುತ್ತದೆ. ಕ್ರಿಸ್ತನ ವಾಕ್ಯವನ್ನು ಕೇಳು ವುದರಿಂದಲೇ" (ರೋಮಾಪುರ 10:17) ಎಂದು ಪೌಲನು ಹೇಳಿದ್ದಾನೆ.

ಉದಾಹರಿಸಲು, ನಾನು ಕಳ್ಳರ ಬಗ್ಗೆ ಭಯಪಡುವವನಾಗಿದ್ದೇನೆ. ಆದುದರಿಂದ ನನ್ನ ತಲೆದಿಂಬಿನ ಕೆಳಗೆ ಒಂದು ಗನ್ ಇಟ್ಟು ಕೊಂಡಿರುವೆನೆಂದು ಕಲ್ಪಿಸಿರಿ. ಒಂದು ರಾತ್ರಿ ನನಗೆ ಎಚ್ಚರವಾಗಿ ಯಾರೋ ಬಂದಿರುವದನ್ನು ಕಂಡುಕೊಳ್ಳುವೆನೆಂದು ಊಹಿಸಿರಿ. ನನ್ನ ಗನ್ನಿನ ಸಾಮರ್ಥ್ಯದೊಂದಿಗೆ ಅವನ ಮೇಲೆ ಪ್ರಭಾವಬೀರಿ ಭಯ ಪಡಿಸಲು ಅಪೇಕ್ಷಿಸುತ್ತೇನೆ. ನಾನೇನು ಮಾಡಬಹುದು?

ಎರಡು ಮಾರ್ಗಗಳನ್ನು ತೆಗೆದು ಕೊಳ್ಳುತ್ತೇನೆ: ದೀಪ ಬೆಳಗಿಸುತ್ತೇನೆ, ನನ್ನ ಗನ್ನನ್ನು ಅವನಿಗೆ ತೋರಿಸುತ್ತ, "ಈ ಗನ್ನನ್ನು ನೀನು ನೋಡುವಿಯೋ? ಅದಕ್ಕೆ ಕೊಳವೆಯ ಬ್ಯಾರಲ್ ಇದೆ. ಈ ಕೊನೆಯಲ್ಲಿ ಮದ್ದುಗುಂಡು ಹೊಂದಿಸಲ್ಪಟ್ಟಿದೆ. ಮದ್ದುಗುಂಡಿಗೆ ಕವಚ ಹಾಗೂ ಸೀಸದ ಗುಂಡುಗಳೊಂದಿಗೆ ಮದ್ದು ಇದೆ. ನಾನು ಈ ಟ್ರಿಗರನ್ನು ಎಳೆದರೆ ಹಿಂದಿನ ಸುತ್ತಿಗೆಯು ಚುರಕು ಗೊಂಡು ಬಹಳ ಒತ್ತಡದಿಂದ ಗುಂಡಿನ ಹಿಂಭಾಲವನ್ನು ಅಪ್ಪಳಿಸುತ್ತದೆ. ಸಿಡಿಮದ್ದು ಸ್ಫೋಟಗೊಂಡು ಕೊಳವೆಯಲ್ಲಿಯ ಸೀಸದ ಗುಂಡು ಗಳು ಹೊರಬರುತ್ತದೆ. ನಾನು ಇದನ್ನು ನಿನ್ನ ದಿಕ್ಕಿನ ಕಡೆಗೆ ಇಟ್ಟರೆ ವೇಗದಿಂದ ಗುಂಡು ಬಂದು ನಿನ್ನಲ್ಲಿ ದೊಡ್ಡ ರಂಧ್ರವನ್ನು ಮಾಡುವುದು" ಎಂದು ಹೇಳುವೆನು.

ಇನ್ನೊಂದು ಕಡೆಯಲ್ಲಿ, ಗಾಳಿಯಲ್ಲಿ ಕೆಲವು ಗುಂಡುಗಳನ್ನು ಹಾರಿಸಬಹುದು.

ಇದು ಹೆಚ್ಚು ಪರಿಣಾಮಕಾರಿಯಾದ ಸಾಧ್ಯತೆಯಾಗಿದೆ!

ಬೈಬಲ್ ಬಗ್ಗೆ ನಾವು ಬಹಳವಾಗಿ ಮಾತಾಡಬಹುದು. ಆದರೆ ಬೈಬಲ್ ಬಲವುಳ್ಳದ್ದೆಂದು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ, ಅದು, "ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು" (ಇಬ್ರಿಯ 4:12) ಆಗಿದೆ. ಅದು ವೈಯಕ್ತಿಕ ಜೀವಿತ, ರಾಷ್ಟ್ರಗಳ ಮತ್ತು ಚರಿತ್ರೆಯ ಮಾರ್ಗವನ್ನು ಬದಲಾಯಿಸಿದೆ.

ಬೈಬಲ್ ದೇವರಿಂದ ಬಂದದ್ದು ಎಂಬುದಕ್ಕೆ ಅಂತಿಮ ರುಜುವಾತನ್ನು ನಿಜವಾಗಿಯೂ ಅಪೇಕ್ಷಿಸಿದರೆ, ನಿಮ್ಮ ಬ್ರದುಕಿನಲ್ಲಿ ಅದಕ್ಕೆ ಅವಕಾಶ ಕೊಡಿರಿ. ಅದನ್ನು ಓದಿರಿ, ಅದನ್ನು ಅಧ್ಯಯನ ಮಾಡಿರಿ (ನಿಜವಾಗಿಯೂ ಅದನ್ನು ಅಭ್ಯಸಿಸಿರಿ). ಅದನ್ನು ನಿಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳಿರಿ. ಜೆ. ಬಿ. ಫಿಲಿಪ್ಸ್ ಅವರು ಹೇಳಿದಂತೆ ಅದಕ್ಕೆ ಆ "ಸತ್ಯದ ಮುದ್ರಿಕೆ" ಇದೆಯೆಂದು ನೀವು ನೋಡುವಿರಿ!

## ದೇವರು ಮನುಷ್ಯನನ್ನು ಪ್ರೀತಿಸುತ್ತಾನೆ ಹಾಗೂ ಅವನಿಗೆ ಸಹಾಯ ಮಾಡಲು ಅಪೇಕ್ಷಿಸುತ್ತಾನೆ ಎಂದು ನಂಬುವುದು ಸಮಂಜಸವಾಗಿದೆ

ನಾವು ನಮ್ಮ ಜಗತ್ತಿನ ಸುತ್ತಲೂ ನೋಡುವಾಗ, ದೇವರು ವೈಯಕ್ತಿಕ ದೇವರಾಗಿದ್ದು ನಮ್ಮ ಪ್ರತಿಯೊಂದು ಅವಶ್ಯಕತೆಯನ್ನು ಕುರಿತು ಚಿಂತಿಸುವನು ಎಂಬ ಸಂಗತಿಯೊಂದಿಗೆ ಪ್ರಭಾವಿತರಾಗಿದ್ದೇವೆ ಎಂದು ಹೇಳದೇ ಇರಲಾರೆವು. ನಾವು ಅದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವಾಗ, ದೇವರು ಸ್ಪಷ್ಟವಾಗಿ ನಮ್ಮನ್ನು ಪ್ರೀತಿಸುತ್ತಾನೆ.

ದೇವರು ಈ ಜಗತ್ತನ್ನು ದೈಹಿಕ ಅಗತ್ಯತೆಗಳನ್ನು ತೃಪ್ತಿಗೊಳಿಸಲು ಕಾರ್ಯಾಚರಣೆಯದ್ದನ್ನಾಗಿ ಸೃಷ್ಟಿಸಬಹುದಿತ್ತು. ಆದರೆ ಆತನು ಹಾಗೆ ಮಾಡಲಿಲ್ಲ. ಆತನು ಅದನ್ನು ಸುಂದರವಾಗಿ ಮಾಡಿದ್ದಾನೆ. ಆತನು ಹೂವುಗಳನ್ನು ನಿರ್ಮಿಸಿದನು. ಆತನು ಬಣ್ಣ ಬಣ್ಣದ ಪಕ್ಷಿಗಳನ್ನು ಸೃಷ್ಟಿಸಿದನು. ಆತನು ಮಾಡಿದ ಪ್ರತಿಯೊಂದು "ಬಹಳ ಒಳ್ಳೆಯದಾಗಿತ್ತು" (ಆದಿಕಾಂಡ 1:31).

ಏದೆನ್ ತೋಟದಲ್ಲಿ (1) "ನೋಡುವದಕ್ಕೆ ರಮ್ಯವಾಗಿಯೂ" ಮತ್ತು (2) "ಊಟಕ್ಕೆ ಅನುಕೂಲವಾಗಿಯೂ" (ಆದಿಕಾಂಡ 2:9) ಇರುವ ಪ್ರತಿಯೊಂದು ಮರವನ್ನು ದೇವರು ಇಟ್ಟನು. ಮನುಷ್ಯನಿಗೆ "ಸರಿಬೀಳುವ ಸಹಕಾರಿಣಿ"ಯನ್ನು ಆತನು ಸೃಷ್ಟಿಸಿದಾಗ, ಮಕ್ಕಳನ್ನು ಹೆರಲು ಸಾಮರ್ಥ್ಯವುಳ್ಳ ಮಾಂಸದ ಮುದ್ದೆಯನ್ನು ಆತನು ಮಾಡಬಹುದಿತ್ತು, ಅದರ ಬದಲು ಮನುಷ್ಯನ ಜೀವನಕ್ಕೆ ಸರಿಬೀಳುವ ಸುಂದರವಾದ ಜೀವಿಯನ್ನಾಗಿ ನಿರ್ಮಿಸಿದನು.

ಮನುಷ್ಯನ ಅಗತ್ಯತೆಗಳ ಬಗ್ಗೆ ನಾವು ಯೋಚಿಸುವಾಗ, ಅಂತಿಮವಾಗಿ ನಾವು ನೈತಿಕ ಮತ್ತು ಆತ್ಮಿಕ ಆಗತ್ಯತೆಗಳಿಗೆ ಬರುವೆವು. ಪ್ರತಿಯೊಬ್ಬ ವ್ಯಕ್ತಿಯು ಒಂದಾನೊಂದು ಸಮಯದಲ್ಲಿ ಆತ್ಮಿಕ ಅಪೇಕ್ಷೆಗಳನ್ನು ಬಯಸಲಿಲ್ಲವೇ? ದೇವರ ಮಟ್ಟಗಳಿಂದ ತಾನು ಎಂದೂ ಬಿದ್ದುಹೋಗಿಲ್ಲ ಎಂದು ಯಾವುದೇ ವ್ಯಕ್ತಿ ಹೇಳಿರುವನೋ? ಪ್ರತಿಯೊಬ್ಬ ವ್ಯಕ್ತಿಯೂ ಕೆಲವು ಸಮಯಗಳಲ್ಲಿ ಸಹಾಯ ಹೀನನೊ ತನಗಿಂತ ದೊಡ್ಡವನಾದ ಒಬ್ಬಾತನ ಅವಶ್ಯಕತೆಯುಳ್ಳವನೂ ಎಂಬುದಾಗಿ ಭಾವಿಸಲಿಲ್ಲವೋ? "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾಪುರ

3:23) ಎಂದು ಬೈಬಲ್ ಹೇಳುತ್ತದೆ.

ದೇವರ ಪ್ರೀತಿಯನ್ನೂ ಚಿಂತನೆಯನ್ನೂ ತಿಳಿದುಕೊಂಡು ದೇವರು ನಮಗಾಗಿ ಮಾಡಿದ ಆತ್ಮಿಕ ಸಂಗತಿಗಳ ಬಗ್ಗೆ ಓದಲು ನಾವು ಆಶ್ಚರ್ಯಪಡಲಾರೆವು. ಆತನು ತನ್ನ ಕುಮಾರನಲ್ಲಿ ಪಾಪದ ಶಿಕ್ಷೆಯನ್ನು ವಿಧಿಸಿಕೊಂಡನು. ಯೇಸು ಕ್ರಿಸ್ತನ ಮುಖಾಂತರ ವಾಗಿ ಸತತವಾದ ಆತ್ಮಿಕ ಸಹಾಯವನ್ನು ಒದಗಿಸಿಕೊಟ್ಟಿರುವನು. ದೇವರ ಪ್ರೀತಿಯ ಬೆಳಕಿನಲ್ಲಿ ಈ ರೀತಿಯ ವಾಕ್ಯವೃಂದಗಳು ಸಮಂಜಸವಾದವು ಗಳೆಂದು ಹೇಳ ಬಯಸುತ್ತೇನೆ.

> "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಕುಮಾರನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16).

> ... ಲೇಖನದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಲೇಖನದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (1 ಕೊರಿಂಥ 15:3, 4).

ಅಕಾಶಮಂಡಲಗಳನ್ನು ದಾಟಿಹೋದ ದೇವ ಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ... ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:14-16).

## ದೇವರು ಪ್ರತ್ಯುತ್ತರವನ್ನು ಅಪೇಕ್ಷಿಸುತ್ತಾನೆಂದು ನಂಬುವುದು ಸಮಂಜಸವಾಗಿದೆ

ನಮ್ಮ ಆತ್ಮಿಕ ಒಳ್ಳೆಯದಕ್ಕಾಗಿ ದೇವರು ನಮಗೆ ಒದಗಿಸಿಕೊಟ್ಟಿದ್ದರೂ ಆತನು ನಮ್ಮನ್ನು ಯಂತ್ರ ಮಾನವರನ್ನಾಗಿ ಮಾಡಲಿಲ್ಲ. ವಿಧೇಯರಾಗಲು ಆತನು ನಮಗೆ ಆಜ್ಞೆಗಳನ್ನು ಕೊಟ್ಟಿದ್ದಾನೆ. ಆದರೆ ಆತನು ನಮಗಾಗಿ ಸ್ವೇಚ್ಛಾ ನಿರ್ಣಯವನ್ನು ಕೊಟ್ಟಿದ್ದಾನೆ. ಆತನು ನಮ್ಮನ್ನು ಸ್ವತಂತ್ರ ನೈತಿಕ ಕಾರ್ಯಸ್ಥರನ್ನಾಗಿಯೂ ಮಾಡಿದ್ದಾನೆ. ಆಯ್ಕೆಯ ಹಕ್ಕು ನಮಗಿರುವುದು. ನಾವು ನಂಬ ಬಹುದು ಇಲ್ಲವೇ ನಂಬದೇ ಇರಬಹುದು. ನಾವು ಪ್ರೀತಿಸಬಹುದು ಇಲ್ಲವೇ ನಾವು ದ್ವೇಷಿಸಬಹುದು.

ನಮ್ಮ ವಿಶ್ವಾಸದ ತಳಹದಿಯಾಗಿರುವ ರುಜುವಾತನ್ನು ದೇವರು ನಮಗೆ ಕೊಟ್ಟಿದ್ದಾನೆ. ಅಗಣಿತ ಮಾರ್ಗಗಳಲ್ಲಿ ಆತನು ತನ್ನ ಪ್ರೀತಿಯನ್ನು ಪ್ರಕಟಿಸಿದ್ದಾನೆ. ನಮ್ಮಿಂದ ವಿಶ್ವಾಸದ, ವಿಧೇಯತೆಯ ಮತ್ತು ಪ್ರೀತಿಯ ಪ್ರತ್ಯುತ್ತರವನ್ನು ಆತನು ಅಪೇಕ್ಷಿ ಸುವುದು ಅಸಮಂಜಸವಾದದ್ದೋ?

- ವಿಶ್ವಾಸ: "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು

ನಂಬುವದು ಅವಶ್ಯ" ಎಂದು ಇಬ್ರಿಯ 11:6 ಹೇಳುತ್ತದೆ.

- ವಿಧೇಯತೆ: "ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" ಎಂದು ಇಬ್ರಿಯ 5:9 ಹೇಳುತ್ತದೆ.
- ಪ್ರೀತಿ: "ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕಂದರೆ ದೇವರು ಪ್ರೀತಿಸ್ವರೂಪಿಯು" ಎಂದು 1 ಯೋಹಾನ 4:8 ಹೇಳುತ್ತದೆ.

ದೇವರು ನಮ್ಮನ್ನು ಯಂತ್ರಮಾನವರಂತೆ ಮಾಡಲಿಲ್ಲ. ಯಾಕಂದರೆ ಯಂತ್ರಮಾನವರ ಪ್ರತಿಕ್ರಿಯೆಯು ಯಾಂತ್ರಿಕವಾದದ್ದು, ಸ್ವಯಂ ಚಾಲಕವಾದದ್ದು, ಅರ್ಥಹೀನವಾದದ್ದು ಆಗಿರುತ್ತದೆ. ಇದಕ್ಕೆ ವಿರೋಧವಾಗಿ ಸ್ವತಂತ್ರ ಚಿತ್ತವುಳ್ಳವರ ಪ್ರತಿಕ್ರಿಯೆಯು ಅರ್ಥವುಳ್ಳದ್ದಾಗಿದೆ.

ನಮಗಾಗಿ ದೇವರು ಮಾಡಿದ ಪ್ರತಿಯೊಂದನ್ನು ನಾವು ಯೋಚಿಸುವಾಗ ಗಲಾತ್ಯ 5:6ರಲ್ಲಿ ಸಾರಾಂಶವಾಗಿಸಿದ ಉತ್ತರವನ್ನು, "ಪ್ರೀತಿಯಿಂದ ಕೆಲಸಮಾಡುವ ನಂಬಿಕೆಯನ್ನು" ಆತನು ಅಪೇಕ್ಷಿಸುವುದೂ ನಿರೀಕ್ಷಿಸುವುದೂ ಸಮಂಜಸವಾಗಿದೆ.

ಈ ಚರ್ಚೆಯು ಬಹಳವಾಗಿ ವಿಸ್ತರಿಸಲ್ಪಡಬಹುದು. ಯಾಕಂದರೆ ಹೊಸ ಒಡಂಬಡಿಕೆಯು ದೇವರಿಂದ ಅಪೇಕ್ಷಿಸಲ್ಪಟ್ಟ ಮತ್ತು ಅಗತ್ಯವಾಗಿರುವ ಸ್ಪಷ್ಟವಾದ ಮಾಹಿತಿಯೊಂದಿಗೆ ತುಂಬಿರುತ್ತದೆ. ಈಗ ನಮ್ಮ ವಿಚಾರ ಸರಣಿಯಲ್ಲಿ ಒಂದು ಕೊನೆಯ ಕೊಂಡಿಯೊಂದಿಗೆ ನಮ್ಮ ಅಧ್ಯಯನವನ್ನು ಮುಗಿಸೋಣ.

## ಲೆಕ್ಕ ಒಪ್ಪಿಸುವದಕ್ಕಾಗಿ ಮನುಷ್ಯನನ್ನು ದೇವರು ಒಂದಾನೊಂದು ದಿನ ಕರೆಯುವನು ಎಂದು ನಂಬುವುದು ಸಮಂಜಸವಾಗಿದೆ

ನಮ್ಮ ಸುತ್ತಲೂ ಎಲ್ಲಾ ಕಡೆಗಳಲ್ಲಿ ಈ ಜೀವವಷ್ಟೇ ಇರುವಂಥದ್ದಲ್ಲ ಎಂಬುದಕ್ಕೆ ಸೂಚನೆಗಳನ್ನು ಕಾಣುತ್ತೇವೆ. ಪ್ರತಿಯೊಂದು ಜನಾಂಗದಲ್ಲಿಯೂ ಅಮರತ್ವದ ಭಾವನೆಯಿರುವುದು. ನಿಜವಾದ ದೇವರಿಂದ ದೂರ ತಳ್ಳಲ್ಪಟ್ಟ ಜನರೂ ಸಹ ಈ ಜೀವನವನ್ನು ದಾಟಿ ಇರುವ ಜೀವನದ ಬಗ್ಗೆ ನಂಬಿಕೆಯನ್ನಿಟ್ಟು ಕೊಂಡಿರುವರು.[7]

ಬರಲಿಕ್ಕಿದ್ದ ಆ ಜೀವಿತವನ್ನು ಕುರಿತು ಈ ಜೀವನದಲ್ಲಿ ನಮಗೆ ಕೊಡಲ್ಪಟ್ಟದ್ದನ್ನು - ಆಶೀರ್ವಾದಗಳನ್ನು, ಅವಕಾಶಗಳನ್ನು, ಆಹ್ವಾನಗಳನ್ನು ನಾವು ಹೇಗೆ ಉಪಯೋಗಿಸಿರುವೆವು ಎಂಬುದರ ಬಗ್ಗೆ ಲೆಕ್ಕಕೊಡಲು ದೇವರು ನಮ್ಮನ್ನು ಕರೆಯುವನು ಎಂದು ನಂಬುವುದು ಸಮಂಜಸವಾಗಿದೆ. "ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ" (1 ಕೊರಿಂಥ 4:2) ಎಂದು ನಮಗೆ ಹೇಳಲ್ಪಟ್ಟಿದೆ.

ಲೆಕ್ಕಾಕೊಡುವ ಸಮಯವನ್ನು "ನ್ಯಾಯ ತೀರ್ಪಿಕೆಯ" ದಿನ ಎಂದು ಬೈಬಲ್ ಕರೆಯುತ್ತದೆ. "ಒಂದೇ ಸಾರಿ ಸಾಯುವದೂ ಆ ಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ನೇಮಕವಾಗಿದೆ" ಎಂದು ಇಬ್ರಿಯ 9:27 ಹೇಳುತ್ತದೆ.

ನ್ಯಾಯತೀರ್ಪಿಕೆಯ ತತ್ವವು ಯೋಗ್ಯವಾದದ್ದಾಗಿದೆ ಎಂದ ನಾನು ನಂಬುತ್ತೇನೆ. ಈ ಜೀವನದಲ್ಲಿ ಬಹಳ ಸಲ "ಪುಸ್ತಕಗಳು ಹೊಂದಾಣಿಕೆಯಲ್ಲಿ ಇರುವದಿಲ್ಲ."

ದುಷ್ಟರು ಆಗಾಗ ಸಮೃದ್ಧರಾಗುವರು; ಒಳ್ಳೆಯವರು ಬಹಳಸಲ ಹಿಂಸಿಸಲ್ಪಡುವರು. ಅಪರಾಧಿಗಳು ಸ್ವತಂತ್ರರಾಗಿ ಹೋಗುವರು. ನಿರಪರಾಧಿಗಳು ಶ್ರಮೆತಾಳುವರು. ನಿಶ್ಚಯವಾಗಿ ದೇವರಿದ್ದಾನೆ. ಒಂದು ದಿನ ತಪ್ಪುಗಳು ಸರಿಪಡಿಸಲ್ಪಡುವವು ಹಾಗೂ ಲೆಕ್ಕಾಚಾರಿಗಳು ನೀತಿಯಿಂದ ತೀರಿಸಲ್ಪಡುವವು.

ಇದರ ಅರ್ಥ ಒಂದು ದಿನ ನೀವು ದೇವರ ಮುಂದೆ ನಿಲ್ಲಬೇಕು. ಆ ಸಮಯದಲ್ಲಿ "ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡ ಬೇಕು" (ರೋಮಾಪುರ 14:12).

## ಮುಕ್ತಾಯ

ನಮ್ಮ ಆಲೋಚನೆಯ ಸರಪಣಿಯಲ್ಲಿ ಇಲ್ಲಿ "ಕೊಂಡಿಗಳಿವೆ": ಹೀಗೆ ನಂಬುವುದು ಸಮಂಜಸವಾದದ್ದಾಗಿದೆ ...

- ದೇವರು ಇದ್ದಾನೆ ಎಂದು.
- ಆತನು ಪ್ರತಿಯೊಂದನ್ನು ಮಾಡಿದ್ದಾನೆ - ಹಾಗೂ ಆತನು ವಿಶೇಷ ವಾಗಿ ಮಾನವನನ್ನು ಉಂಟು ಮಾಡಿದ್ದಾನೆ ಎಂದು.
- ಆತನು ಮಾನವನಿಗೆ ಒಂದು ಪ್ರಕಟನೆಯನ್ನು ಕೊಟ್ಟಿದ್ದಾನೆ - ಹಾಗೂ ಆತನ ಪ್ರಕಟನೆಯು ಬೈಬಲಾಗಿದೆ ಎಂದು.
- ಆತನು ಮನುಷ್ಯನನ್ನು ಪ್ರೀತಿ ಮಾಡುತ್ತಾನೆ ಮತ್ತು ಅವನಿಗೆ ಸಹಾಯ ಮಾಡುತ್ತಾನೆ - ಕ್ರಿಸ್ತನ ಮುಖಾಂತರ ಆತ್ಮಿಕ ಮಾರ್ಗದಲ್ಲಿ ಅವನಿಗೆ ಸಹಾಯ ಮಾಡುತ್ತಾನೆ ಎಂದು.
- ಆತನು ಪ್ರತ್ಯುತ್ತರವನ್ನು ಅಪೇಕ್ಷಿಸುತ್ತಾನೆ ಹಾಗೂ ನಿರೀಕ್ಷಿಸುತ್ತಾನೆ ಎಂದು.
- ಮಾನವನು ತನ್ನ ದೈಹಿಕ ಮತ್ತು ಆತ್ಮಿಕ ಆಶೀರ್ವಾದಗಳನ್ನು ಹಾಗೂ ಅವಕಾಶಗಳನ್ನು ಅವನು ಹೇಗೆ ಉಪಯೋಗಿಸಿದನು ಎಂಬುದರ ಲೆಕ್ಕ ಕೊಡಲು ಅಂತಿಮವಾಗಿ ಅವನು ದೇವರ ಮುಂದೆ ಕರೆಯಲ್ಪಡುವನು ಎಂದು.

ಆ ದಿನಕ್ಕಾಗಿ ಸಿದ್ಧರಾಗಲು ನೀವು ಇತ್ತೀಚೆಗೆ ಏನು ಮಾಡಿದ್ದೀರಿ?

ಈ ಪಾಠವನ್ನು ನಾವು ಮುಗಿಸುವಾಗ, ಯೇಸುವಿನ ಪ್ರಶ್ನೆಗೆ ಹಿಂದಿರುಗೋಣ: "ಮನುಷ್ಯ ಕುಮಾರನು ಬರುವಾಗ ಭೂಮಿಯ ಮೇಲೆ ನಂಬಿಕೆಯನ್ನು ಕಂಡುಕೊಳ್ಳು ವನೋ?" ಈ ಪ್ರಶ್ನೆಯನ್ನು ಇನ್ನೂ ಹೆಚ್ಚು ವೈಯಕ್ತಿಕವಾದದ್ದನ್ನಾಗಿ ಮಾಡಿಕೊಳ್ಳೋಣ: "ಮನುಷ್ಯ ಕುಮಾರನು ಬಂದಾಗ ನಿಮ್ಮ ಹೃದಯದಲ್ಲಿ ಆತನು ನಂಬಿಕೆಯನ್ನು ಕಂಡು ಕೊಳ್ಳುವನೋ?" ಇದು ನಿಮಗಿರುವ ಪ್ರಶ್ನೆಯ ಅತೀ ಮುಖ್ಯವಾದ ಭಾಗವಾಗಿದೆ.

"ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" (ಮಾರ್ಕ 9:24) ಎಂದು ಆ ಮನುಷ್ಯನು ಕೂಗಿಕೊಂಡಂತೆ ನೀವು ನಿಮ್ಮನು ಕಂಡುಕೊಳ್ಳ ಬಹುದು. ನಿಮಗೆ ನಂಬಿಕೆಯ ಕೊರತೆಯಿದ್ದರೆ, ಅದು ಕೇವಲ ಕಲಿಯುವಂಥದ್ದಾಗಿದ್ದರೆ ಇಲ್ಲವೇ ಕರ್ತನಿಗೆ ನಿಮ್ಮನ್ನು ನಿಮ್ಮ ಜೀವಿತವನ್ನು ಸಂಪೂರ್ಣ ವಾಗಿ ಸಮರ್ಪಿಸುವದಕ್ಕೆ ಸಾಕಷ್ಟು ಇರದಿದ್ದರೆ, ಕರ್ತನು ಬರುವಾಗ ಪ್ರೀತಿಯಿಂದ

ಕಾರ್ಯ ಮಾಡುವ ನಂಬಿಕೆಯನ್ನು ನಮ್ಮಲ್ಲಿ ಆತನು ಕಂಡುಕೊಳ್ಳುವಂತೆ, ನೀವು ಬೈಬಲನ್ನು ಓದಿರಿ, ಅಧ್ಯಯನ ಮಾಡಿರಿ, ಅದಕ್ಕೆ ವಿಧೇಯರಾಗಿರಿ ಎಂದು ನಿಮಗೆ ಒತ್ತಾಯ ಮಾಡುತ್ತೇನೆ.

---

ಟಿಪ್ಪಣಿಗಳು

[1]ನಮ್ಮ ಜಗತ್ತು ಮುಖ್ಯವಾಗಿ ಕ್ರಮ ಮತ್ತು ನಮೂನೆವುಳ್ಳದ್ದಾಗಿದೆ. "ಕೆಡುಕಿನ ಸಮಸ್ಯೆ" ಯೊಂದಿಗೆ ನಾವು ವ್ಯವಹರಿಸಬೇಕಾಗಿರುವಾಗ, ಅವಿಶ್ವಾಸಿಗೆ ದೊಡ್ಡ ಸವಾಲಿರುವುದು: ಒಳ್ಳೆಯದರ ಸಮಸ್ಯೆಯನ್ನು ವಿವರಿಸುವುದು. [2]ವಿಶ್ವವು ಆಗಾಗ ತನ್ನನ್ನು ನವೀಕರಿಸಿಕೊಳ್ಳುವ "ಕಾಲಚಕ್ರ" ಸಿದ್ಧಾಂತವಿದೆಯೆಂದು ತಿಳಿದು ಕೊಳ್ಳುತ್ತೇನೆ. ಆದರೆ ಈ ಸಮಯದಲ್ಲಿ ವಿಜ್ಞಾನದ ತಿಳಿದ ಸಂಗತಿಗಳಿಗೆ ವಿರುದ್ಧವಾಗಿ ಹೋಗುವ ಸಿದ್ಧಾಂತವಾಗಿ ಅದು ಉಳಿದು ಕೊಂಡಿದೆ. [3]ವಿಚಾರದ ಈ ಚಿತ್ತಾಕರ್ಷಕ ಸರಣಿಯನ್ನು ಸಂಪೂರ್ಣವಾಗಿ ಚರ್ಚಿಸಲು ಸಮಯವಿರುವದಿಲ್ಲ. *The Evidence of God* ಎಂಬುದರಲ್ಲಿ ಲೇಖಕರಲ್ಲಿ ಒಬ್ಬನು, ಪ್ರತಿಯೊಂದು ಮಾಡಲ್ಪಡುವದನ್ನು ನಾವು ಅರ್ಥಮಾಡಿಕೊಳ್ಳುವುದು ನೈಸರ್ಗಿಕವಾದದ್ದು, ಆದರೆ ಕಲಿತು ಕೊಂಡಂಥದ್ದಲ್ಲ ಎಂದು ಹೇಳುತ್ತಾನೆ. "ಅದು ಎಲ್ಲಿಂದ ಬಂದಿತು? ಅದನ್ನು ಯಾರು ಮಾಡಿದರು?" ಎಂದು ಪ್ರತಿಯೊಂದು ಮಗು ಪ್ರಶ್ನಿಸುತ್ತದೆ. [4]ನೂರಾರು, ಸಾವಿರಾರು ಡಾಲರುಗಳ ಬೆಲೆಯುಳ್ಳ ಒಂದು ಸಲಕರಣೆಯನ್ನು ಒಂದು ಟೆಲಿವಿಜನ್ ಕಾರ್ಯಕ್ರಮದಲ್ಲಿ ಇತ್ತೀಚಿಗೆ ನೋಡಿದೆ. ಆ ಸಲಕರಣೆಯನ್ನು ಒಂದು ಉದ್ದೇಶಕ್ಕಾಗಿ ಉಪಯೋಗಿಸಲು - ರೇಡಿಯೋ ವಸ್ತುಗಳನ್ನು ನಾಜೂಕಾದ ಡಬ್ಬಿಯನ್ನು ಎತ್ತಿ ಸಾಗಿಸಲು ಅದಕ್ಕೆ ಬಹಳ ತರಬೇತಿಯೂ ಅನುಭವವೂ ಬೇಕಾಗಿತ್ತು. ಮಾನವ ಹಸ್ತದ ಸಾಮರ್ಥ್ಯಗಳಲ್ಲಿ ಒಂದನ್ನು ಅದು ಸಾಧಿಸುವುದೆಂದು ಬೇರೆ ಮಾತಿನಲ್ಲಿ ಹೇಳಬಹುದು. [5]ನಿತ್ಯತ್ವಕ್ಕೆ ಹೋಗುವ ಮಾರ್ಗದಲ್ಲಿ ಈ ಜಗತ್ತು ಒಂದು ನಿಲುಗಡೆಯ ಸ್ಥಳವಾಗಿದೆಯೆಂದು ಬೈಬಲ್ ಹೇಳುತ್ತದೆ. ಆದರೆ ನಾವು ಇಲ್ಲಿ ಇರುವಾಗ, ಬೈಬಲು ನಮಗೆ "ಸಮೃದ್ಧ ಜೀವನ" ವನ್ನು ಕೊಡುವದೆಂಬ ಸಂಗತಿ ಉಳಿದುಕೊಳ್ಳುತ್ತದೆ. [6]ಈ ಅನೇಕ ದೇಶಗಳಲ್ಲಿ ಬೈಬಲಿಗೆ ಹೆಚ್ಚು ಪ್ರಭಾವವಿರುವದಿಲ್ಲ. ಆದರೂ ಮೊದಲಿನ ದಿನಗಳಲ್ಲಿ ಬೈಬಲಿಗೆ ಹೆಚ್ಚು ಪ್ರಭಾವ ಇದ್ದುದರಿಂದ ಜೀವನದ ತತ್ವಜ್ಞಾನಗಳು ರೂಪಿಸಲ್ಪಟ್ಟದ್ದೂ ರಾಷ್ಟ್ರೀಯ ನಿರ್ದೇಶನಗಳನ್ನು ನೇಮಿಸಲ್ಪಟ್ಟ ಹೇಳಿಕೆಯೂ ಸತ್ಯವಾಗಿ ಉಳಿಯುತ್ತವೆ. [7]ಮುಂದಿನ ಜೀವನದಲ್ಲಿ ಉಪಯೋಗಿಸುವದಕ್ಕಾಗಿ ಸತ್ತವರಿಗಾಗಿ ಸಮಾಧಿಗಳಲ್ಲಿ ಆಹಾರ ಮತ್ತು ಇತರ ವಸ್ತುಗಳನ್ನು ಇಡುವದರ ಬಗ್ಗೆ ಯೋಚಿಸಿರಿ.

© 2009 Truth for Today